**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>**

**<u>ಎಸ್.ಸಿ. ಸಂಖ್ಯೆ 8/2023</u>**

| | | |
|---|---|---|
| **ಸಾಕ್ಷಿದಾರರ ಹೆಸರು** | : ರೆಹಮತ್‌ಉಲ್ಲಾ ಖಾನ್ | **ಪಿಡಬ್ಲ್ಯೂ : 1** |
| **ತಂದೆಯ / ಗಂಡನ ಹೆಸರು** | : ಅಮೀನ್ ಉದ್ದೀನ್ ಖಾನ್ | **ಸಿಡಬ್ಲ್ಯೂ : 1** |
| **ವಯಸ್ಸು** | : 22 ವರ್ಷ | |
| **ಉದ್ಯೋಗ** | : ಹಣ್ಣಿನ ವ್ಯಾಪಾರ | |
| **ವಾಸಸ್ಥಳ** | : ಕೆಸರೆ , ಮೈಸೂರು | |

**<u>ಸಾಕ್ಷಿಯನ್ನು ಈ ದಿನ ದಿಃ 13.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

2. ಮೃತ ಜಹೀರ್ ಉದ್ದೀನ್ ಖಾನ್ ನನ್ನ ಅಣ್ಣ. ದಿಲ್‌ಷಾದ್ ರವರು ನನ್ನ ತಾಯಿ ಆಗಬೇಕು. ನನಗೂ ಮತ್ತು ನನ್ನ ಮೃತ ಅಣ್ಣನಿಗೂ ಮದುವೆಯಾಗಿರುತ್ತದೆ. ನಾವೆಲ್ಲರೂ ಪ್ರತ್ಯೇಕವಾಗಿ ವಾಸವಿರುತ್ತೇವೆ. ನನ್ನ ಅಣ್ಣ ಮೃತ ಜಹೀರ್ ಉದ್ದೀನ್ ಖಾನ್ ಆಟೋ ಚಾಲಕನಾಗಿ ಕೆಲಸ ಮಾಡುತ್ತಿದ್ದನು. ಸದರಿ ಆಟೋ ಸ್ವಂತದ್ದಾ ಅಥವಾ ಬೇರೆಯವರದ್ದಾ ಎಂದು ನನಗೆ ತಿಳಿದಿರುವುದಿಲ್ಲ. ನನ್ನ ಅಣ್ಣ ಈಗ ಜೀವಿತ ಇರುವುದಿಲ್ಲ.

3. ನನ್ನ ಅಣ್ಣ ತೀರಿಕೊಂಡು 4 ವರ್ಷಗಳಾಗಿರುತ್ತದೆ. ದಿನಾಂಕ ನೆನಪಿರುವುದಿಲ್ಲ. ನನಗೆ ಮೇಟಗಳ್ಳಿ ಪೊಲೀಸ್ ಠಾಣೆಯಿಂದ ಫೋನ್ ಕರೆ ಬಂದಿದ್ದು, ನನ್ನ ಅಣ್ಣನ ಆಟೋ

ಮಗುಚಿ ಬಿದ್ದು, ನನ್ನ ಅಣ್ಣ ತೀರಿಕೊಂಡಿರುತ್ತಾನೆ. ಆತನ ಮೃತ ದೇಹ ಕೆ ಆ್‌ರ್ ಆಸ್ಪತ್ರೆ ಶವಾಗಾರದಲ್ಲಿ ಇರುವ ಬಗ್ಗೆ ಮಾಹಿತಿ ನೀಡಿರುತ್ತಾರೆ. ಮಾಹಿತಿ ತಿಳಿದು ನಾನು ಕೆ ಆರ್ ಆಸ್ಪತ್ರೆಗೆ ಹೋಗಿರುತ್ತೇನೆ. ಕೆ ಆರ್ ಆಸ್ಪತ್ರೆಗೆ ಹೋಗಿ ನಾನು ಮೃತ ದೇಹವನ್ನು ನಾನು ನೋಡಿರುತ್ತೇನೆ. ಆದರೆ ಅವರಿಗೆ ಎಲ್ಲಿ ಗಾಯವಾಗಿತ್ತು ಎಂದು ನಾನು ಗಮನಿಸಿರುವುದಿಲ್ಲ. ನಾನು ಅಲ್ಲಿಗೆ ಹೋದಾಗ ಪೊಲೀಸರು ಇದ್ದರು. ಬೇರೆ ಯಾರು ಇದ್ದರು ಎಂದು ನಾನು ಗಮನಿಸಿರುವುದಿಲ್ಲ.

4. ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ಪೊಲೀಸ್ ಠಾಣೆಯಿಂದ ಒಂದು ದಾಖಲೆಯನ್ನು ತಂದು ನನಗೆ ಸಹಿ ಮಾಡಲು ಹೇಳಿದ್ದು, ನಾನು ಸಹಿ ಮಾಡಿರುತ್ತೇನೆ. ಯಾವ ಕಾರಣಕ್ಕೆ ಸಹಿ ಪಡೆದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ.

5. ನಂತರ ಅದೇ ದಿನ ಆಟೋ ಬಿದ್ದ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗಿದ್ದು , ಅಲ್ಲಿ ಪೋಟೋವನ್ನು ತೆಗೆದಿರುತ್ತಾರೆ. ಅಲ್ಲಿ ಬೇರೆ ಏನು ಮಾಡಿದರು ನನಗೆ ತಿಳಿದಿರುವುದಿಲ್ಲ. ಸ್ಥಳದಲ್ಲಿ ಬಿದ್ದ ಆಟೋವನ್ನು ನನ್ನ ಅಣ್ಣ ಓಡಿಸುತ್ತಿದ್ದನು. ನಾನು ನೋಡಿದಾಗ ಆಟೋ ಪಲ್ಟಿಯಾಗಿ ಅದರ ಮುಂದುಗಡೆ ಇರುವ ಗಾಜು ಹೊಡೆದು ಹೋಗಿತ್ತು ಮತ್ತು ವಾಹನ ಜಖಂ ಆಗಿತ್ತು. ಆಟೋ ಬಿದ್ದ ಸ್ಥಳದಲ್ಲಿ ನಾನು ದಾಖಲೆಗೆ ಸಹಿ ಹಾಕಿರುತ್ತೇನೆ. ನಂತರ ಆಟೋವನ್ನು ಪೊಲೀಸರು ಠಾಣೆಗೆ ತೆಗೆದುಕೊಂಡು ಹೋದರು. ನನ್ನ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದೂರಾಗಿದ್ದು, ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯು ಸ್ಥಳ ಮಹಜರ್ ಆಗಿದ್ದು, ಅದನ್ನು ನೋಡಿ

ಗುರುತಿಸಿದ್ದು , ಸದರಿ ದಾಖಲೆಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ನಾನು ಪೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಸ್ಥಳ ಮಹಜರ್ ಕಾಲದಲ್ಲಿ ತೆಗೆದ ಒಟ್ಟು 7 ಪೋಟೋಗಳನ್ನು ನೋಡಿ ಗುರತಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ನಿಪಿ.3 ಎಂದು ಗುರುತಿಸಲಾಯಿತು. ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯು ಕಚ್ಚಾ ನಕಾಶೆಯಾಗಿದ್ದು, ಅದನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ.4 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 4(ಎ) ಎಂದು ಗುರುತಿಸಲಾಯಿತು.

6. ನಂತರ ಮರಣೋತ್ತರ ಪರೀಕ್ಷೆ ಬಳಿಕ ಮೃತ ದೇಹವನ್ನು ಸಂಜೆ ನಮಗೆ ಹಸ್ತಾಂತರಿಸಿರುತ್ತಾರೆ. ನಂತರ ಅಂತ್ಯಕ್ರಿಯೆಯನ್ನು ಮಾಡಿರುತ್ತೇವೆ.

7. ನಂತರ ನನ್ನ ಅಣ್ಣ ಮೇಕೆ ಕಳ್ಳತನ ಮಾಡಿರುತ್ತಾನೆ ಎಂದು ಹೇಳಿ, ಊರಿನವರು ಹೊಡೆದಿರುತ್ತಾರೆ ಎಂಬ ಮಾಹಿತಿ ತಿಳಿದು ಬಂದಿರುತ್ತದೆ. ಆತನ ಮೇಲೆ ಬೇರೆ ಪ್ರಕರಣಗಳು ಇದ್ದು, ಹೊಡೆದಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ಯಾರು ಅವರು ಮೇಲೆ ಹಲ್ಲೆ ಮಾಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತರನ್ನು ನಾನು ನೋಡಿರುವುದಿಲ್ಲ. ಅವರ ಪರಿಚಯ ನನಗೆ ಇರುವುದಿಲ್ಲ. ಆರೋಪಿತರ ಮೇಲೆ ಯಾವ ಕಾರಣಕ್ಕೆ ಪ್ರಕರಣ ದಾಖಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಪೊಲೀಸರು ಮತ್ತೆ ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

<u>ಪಾಟೀ ಸವಾಲು : ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

8. ನನ್ನ ಅಣ್ಣ ಜಹೀರ್ ಉದ್ದೀನ್ ಅವರ ಕೌಟುಂಬಿಕ ಕಾರಣಗಳಿಂದ ನನ್ನ ಅತ್ತಿಗೆ ಮತ್ತು ಮಕ್ಕಳು ಕೇರಳಾಕ್ಕೆ ಹೋಗಿದ್ದರಿಂದ ಕಳೆದ ಒಂದು ವರ್ಷದಿಂದ ನನ್ನ ಅಣ್ಣ ನಮ್ಮ ಜೊತೆ ವಾಸ ಇದ್ದರು ಎಂದರೆ ಸಾಕ್ಷಿಯು ಅವರು ನಮ್ಮ ಜೊತೆ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಅಣ್ಣನ ಬಳಿ ಸ್ವಂತ ಆಟೋ ಇರಲಿಲ್ಲ. ಅವರು **KLNB 7303** ಆಟೋವನ್ನು ಬಾಡಿಗೆಗೆ ಹೊಡೆಯುತ್ತಿದರು ಎಂದರೆ ಸರಿ. ನನ್ನ ಅಣ್ಣನ ಮೇಲೆ ಮೇಕೆ , ಕುರಿ ಮತ್ತು ದನಗಳನ್ನು ಕಳ್ಳತನ ಮಾಡುವ ಚಾಳಿ ಇದ್ದು , ಆತನ ಮೇಲೆ ಕೇಸ್ ಗಳು ಸಹ ಇದ್ದವು ಎಂದರೆ ಸರಿ.

9. ದಿ.19.01.2020 ರಂದು ಬೆಳಿಗ್ಗೆ 07.30 ರ ಸಮಯಕ್ಕೆ ನನ್ನ ಅಣ್ಣ ಆಟೋ ತೆಗೆದುಕೊಂಡು ಮನೆಯಿಂದ ಹೊರಟು ಹೋದರು. ನಂತರ ಮಧ್ಯಾಹ್ನ ಸುಮಾರು 02.00 ಗಂಟೆ ಸಮಯದಲ್ಲಿ ಶಫಿವುಲ್ಲಾ ನನಗೆ ಫೋನ್ ಮಾಡಿ ನನ್ನ ಅಣ್ಣ ಸತ್ತು ಹೋಗಿದ್ದು, ದೊಡ್ಡ ಆಸ್ಪತ್ರೆಯಲ್ಲಿ ಹೆಣ ಇರುವುದಾಗಿ ಬಾ ಎಂದು ಕರೆದಿದ್ದರು ಎಂದರೆ ಸರಿಯಲ್ಲ. ಆಸ್ಪತ್ರೆಗೆ ಹೋದಾಗ ಅಲ್ಲಿ ಕಾರ್ತಿಕ್ ಎನ್ನುವವನು ಇದ್ದು, ಆತನಿಗೂ ಸಹ ಹಲ್ಲೆಯಾಗಿ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದನು. ಆಗ ನಾನು ನನ್ನ ಅಣ್ಣನ ಸಾವಿನ ಬಗ್ಗೆ ಕಾರ್ತಿಕನಿಗೆ ಹಲ್ಲೆ ಮಾಡಿದ ಬಗ್ಗೆ ಆಸ್ಪತ್ರೆಯಲ್ಲಿ ಇದ್ದವರನ್ನು ವಿಚಾರಿಸಿದಾಗ ಬೆಳವತ್ತಾ ಗ್ರಾಮದಲ್ಲಿ ಮೇಕೆ ಕದಿಯಲು ಹೋಗಿ, ಸಿಕ್ಕಿ ಹಾಕಿಕೊಂಡಿದ್ದರಿಂದ ಹಲ್ಲೆ ಮಾಡಿರುತ್ತಾರೆ ಎಂದು ಅಲ್ಲಿ ಮಾತನಾಡಿಕೊಳ್ಳುತ್ತಿದ್ದರು. ನಾನು ಬೆಳವತ್ತಾ ಗ್ರಾಮಕ್ಕೆ ಹೋಗಿ ಗ್ರಾಮಸ್ಥರನ್ನು ವಿಚಾರಿಸಿದಾಗ ಆ ದಿನ ಸುಮಾರು ಮಧ್ಯಾಹ್ನ 12.30 ರ ಸಮಯದಲ್ಲಿ ನನ್ನ ಅಣ್ಣ ಮತ್ತು ಕಾರ್ತಿಕ್ ಇಬ್ಬರು ಆಟೋದಲ್ಲಿ ಬಂದು ಮೇಕೆ ಕಳ್ಳತನ ಮಾಡಿಕೊಂಡು ಹೋಗುತ್ತಿದ್ದನ್ನು

ಕಂಡ ಜನರು ಕಾರ್ತಿಕ್ ನನ್ನು ವಾಟರ್ ಟ್ಯಾಂಕ್ ಬಳಿ ಹಿಡಿದುಕೊಂಡಿದ್ದು, ನನ್ನ ಅಣ್ಣ ಸಿಕ್ಕಿ ಹಾಕಿಕೊಳ್ಳುತ್ತೇನೆ ಎಂದು ಭಯದಿಂದ ಆಟೋವನ್ನು ಜೋರಾಗಿ ಓಡಿಸಿಕೊಂಡು ಗ್ರಾಮದ ಮುಖ್ಯ ರಸ್ತೆಯಲ್ಲಿ ಬರುತ್ತಿದ್ದಾಗ ತಿರುವಿನಲ್ಲಿ ಆಟೋ ನಿಯಂತ್ರಣ ತಪ್ಪಿ ಮಗುಚಿ ನನ್ನ ಅಣ್ಣನ ಮೇಲೆ ಬಿದ್ದಾಗ ಹಿಂಬಾಲಿಸಿಕೊಂಡು ಬಂದ ಜನರು ಆತನ ಮೇಲೆ ಹಲ್ಲೆ ಮಾಡಿರುತ್ತಾರೆ ಮತ್ತು ಆಟೋ ಜಖಂ ಆಗಿರುತ್ತದೆ. ನನ್ನ ಅಣ್ಣ ಪ್ರಜ್ಞೆ ತಪ್ಪಿ ಬಿದಿದ್ದು, ವಿಚಾರ ತಿಳಿದ ಪೊಲೀಸರು ನನ್ನ ಅಣ್ಣ ಮತ್ತು ಕಾರ್ತಿಕ್ ನನ್ನು ಆಂಬೂಲೆನ್ಸ್ ಕೆ ಅರ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುವುದಾಗಿ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಮಾಹಿತಿ ತಿಳಿದ ನಾನು, ನಾನೇ ದೂರನ್ನು ತಯಾರಿಸಿಕೊಂಡು ಪೊಲೀಸ್ ಠಾಣೆ ಹೋಗಿ ನಿಪಿ.1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

10. ನಂತರ ನಾನು ಪೊಲೀಸರ ಜೊತೆಗೆ ಆಟೋ ಬಿದ್ದ ಸ್ಥಳಕ್ಕೆ ಹೋಗಿ, ಅಲ್ಲಿ ಸ್ಥಳವನ್ನು ನಾನೇ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಸದರಿ ಸ್ಥಳವನ್ನು ಪರಿಶೀಲನೆ ಮಾಡಿ, ಸದರಿ ಸ್ಥಳದಲ್ಲಿ ರಕ್ತ ಬಿದ್ದಿದ್ದು, ಅದನ್ನು ಪೊಲೀಸರು ರಕ್ತ ಮಿಶ್ರಿತ ಮಣ್ಣು ಮತ್ತು ರಕ್ತ ರಹಿತ ಮಣ್ಣನ್ನು ಪ್ರತ್ಯೇಕವಾಗಿ ಪ್ಲಾಸ್ಟಿಕ್ ಡಬ್ಬದಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಆಟೋ ಜಖಂ ಆಗಿ, ಆಟೋದ ಗಾಜು, ಫೈಬರ್ ಗಳನ್ನು ಸಹ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯೂ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ ಮತ್ತು ನನ್ನ ಅಣ್ಣನ ಚಪ್ಪಲಿ ಬಿದ್ದಿದ್ದು, ಅವುಗಳನ್ನು ಸಹ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯೂ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

**11.** ನಂತರ ನನ್ನ ಅಣ್ಣನಿಗೆ ಹಲ್ಲೆ ಮಾಡಿದವರು ಯಾರು ಎಂದು ತಿಳಿದುಕೊಳ್ಳಲು ನಾನು ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಪೊಲೀಸರು ನನಗೆ ವಿಡಿಯೋ ಸಿಕ್ಕಿರುತ್ತದೆ ಎಂದು ಹೇಳಿ ನನಗೆ ವಿಡಿಯೋ ತೋರಿಸಿದರು ಎಂದರೆ ಸರಿಯಲ್ಲ. ನಂತರ ಸದರಿ ವಿಡಿಯೋದಲ್ಲಿ ದಿ.19.01.2021 ರಂದು ಬೆಳಿಗ್ಗೆ 11.53 ನಿಮಿಷಕ್ಕೆ ಬೆಳವತ್ತಾ ಗ್ರಾಮದ ಮುಖ್ಯ ರಸ್ತೆಯಲ್ಲಿ ಆಸ್ಪತ್ರೆ ಕಡೆಯಿಂದ ಆಟೋ ಒಂದು ವೇಗವಾಗಿ ಬಂದು ಲಕ್ಷ್ಮೀ ಹೋಟೆಲ್ ಬಳಿ ತಿರುವಿನಲ್ಲಿ  ಆಟೋ ಮಗುಚಿ ಕೊಂಡು ಬಿದ್ದಾಗ, ಅವನಿಗೆ ಹೊಡೆದರು. ಅವರ ಹೆಸರುಗಳು ಭರತ್ ಕುಮಾರ್, ರವಿ, ಶ್ರೀನಿವಾಸ್ ಎಂದು ಪೊಲೀಸರು ನನಗೆ ತಿಳಿಸಿದರು ಎಂದರೆ ಸರಿಯಲ್ಲ. ಕಾರ್ತಿಕ್‌ನಿಗೆ ಕೂಡ ಹಲ್ಲೆ ಮಾಡಿವರು ಭರತ್ ಕುಮಾರ್, ರವಿ, ಶ್ರೀನಿವಾಸ್ ಎಂದು ಪೊಲೀಸರು ನನಗೆ ತಿಳಿಸಿದರು ಎಂದರೆ ಸರಿಯಲ್ಲ. ಹಿಂದಿನ ದಿನ 21.01.2021 ರಂದು ರವಿ, ಭರತ್, ಮಹೇಶ್ ನನ್ನು ಪೊಲೀಸರು ಅರೆಸ್ಟ್ ಮಾಡಿ ಜೈಲಿಗೆ ಕಳುಹಿಸಿರುತ್ತಾರೆ ಮತ್ತು ಶ್ರೀನಿವಾಸ್, ಉಮೇಶ್ ಇಬ್ಬರು ತಲೆಮರೆಸಿಕೊಂಡಿರುತ್ತಾರೆ ಎಂದು ಮಾಹಿತಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ದಿ.21.01.2021 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು  ನಿಪಿ.5 ಎಂದು ಗುರುತಿಸಲಾಯಿತು.

**12.** ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ  ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ ಎಂದು ನುಡಿಯುತ್ತಾರೆ.</u>**

**<u>ಮರು ವಿಚಾರಣೆ ಃ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**